# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 214 (314) |
| 2) ಸದಸ್ಯರ ಹೆಸರು | : | ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| 3) ಉತ್ತರಿಸುವ ದಿನಾಂಕ | : | 17.07.2019 |
| 4) ಉತ್ತರಿಸುವವರು | : | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಯಚೂರಿನಲ್ಲಿ ಇರುವ ಅರಣ್ಯ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು: | ರಾಯಚೂರು ಜಿಲ್ಲೆಯಲ್ಲಿ ಈ ಕೆಳಗೆ ನಮೂದಿಸಿದ ವರ್ಷಗಳಲ್ಲಿ ನೆಡುತೋಪು ಬೆಳೆಸಿ ಅರಣ್ಯ ಅಭಿವೃದ್ಧಿಪಡಿಸಲಾಗಿರುತ್ತದೆ: |

| ವರ್ಷ | ವಿಸ್ತೀರ್ಣ (ಹೆ./ಕಿ.ಮೀ.) |
|---|---|
| 2016-17 | 1641 |
| 2017-18 | 1872 |
| 2018-19 | 875 |

ಭಾರತೀಯ ಅರಣ್ಯ ಸಮೀಕ್ಷೆ 2017ರ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ 2015-17ರ ಅವಧಿಯಲ್ಲಿ ಅರಣ್ಯ ಹೊದಿಕೆ 20 ಚದರ ಕಿ.ಮೀ. ಹೆಚ್ಚಾಗಿರುತ್ತದೆ.

ಅರಣ್ಯ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ಅರಣ್ಯ ಹೊದಿಕೆ ಮತ್ತು ವೃಕ್ಷಕವಚವನ್ನು ಹೆಚ್ಚಿಸುವ ಸಲುವಾಗಿ ಅರಣ್ಯೀಕರಣ ಕಾಮಗಾರಿಗಳನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ ಸದರಿ ಯೋಜನೆಗಳಡಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಮಾಡಲಾಗುತ್ತಿದೆ.
- ವನಮಹೋತ್ಸವ ಕಾರ್ಯಕ್ರಮದಡಿ ಶಾಲಾ ಕಾಲೇಜುಗಳು, ಸರ್ಕಾರಿ ಕಛೇರಿಗಳ ಆವರಣದಲ್ಲಿ ಮತ್ತು ಸಂಘ ಸಂಸ್ಥೆಗಳ ಜಮೀನುಗಳಲ್ಲಿ ಸಸಿಗಳನ್ನು ನೆಡುವುದು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸರ್ಕಾರೇತರ ಸಂಘ-ಸಂಸ್ಥೆ ಹಾಗೂ ಸಾರ್ವಜನಿಕರುಗಳ ಸಹಭಾಗಿತ್ವದಲ್ಲಿ ಸೂಕ್ತ ಸ್ಥಳಗಳಲ್ಲಿ ಬೀಜ / ಬೀಜದುಂಡೆಗಳನ್ನು ಬಿತ್ತನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಾರ್ವಜನಿಕರಲ್ಲಿ ಅರಣ್ಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ರಸ್ತೆಯ ಇಕ್ಕೆಲಗಳಲ್ಲಿ ನೆಡುತೋಪು ಬೆಳೆಸುವ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ನೆರಳು ಒದಗಿಸಲಾಗುತ್ತಿದೆ. ಅಲ್ಲದೆ, ನೈಸರ್ಗಿಕ ಸಮತೋಲನವನ್ನು ಕಾಪಾಡಲಾಗುತ್ತಿದೆ.
- ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಗರ/ ಮುನಿಸಿಪಲ್ / ಪಟ್ಟಣ ಪಂಚಾಯತ್ ಪ್ರದೇಶಗಳಲ್ಲಿ ಎತ್ತರವಾದ ಸಸಿಗಳನ್ನು ನೆಡಲಾಗುತ್ತಿದೆ.

| | | |
|---|---|---|
| | | • ರೈತರಿಗೆ / ಸಾರ್ವಜನಿಕರಿಗೆ / ಸಂಘ-ಸಂಸ್ಥೆಗಳಿಗೆ ಹೆಚ್ಚು ಹೆಚ್ಚು ಸಸಿಗಳನ್ನು ಬೆಳೆಸಲು ಉತ್ತೇಜಿಸುವ ಸಲುವಾಗಿ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ರಿಯಾಯಿತಿ ದರಗಳಲ್ಲಿ ಸಸಿಗಳನ್ನು ನೀಡಿ ಮೂರು ವರ್ಷಗಳಲ್ಲಿ ಬದುಕುಳಿದ ಪ್ರತಿ ಸಸಿಗೆ ರೂ.100/- ರಂತೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ವಿಶೇಷ ಘಟಕಯೋಜನೆ ಮತ್ತುಗಿರಿಜನ ಉಪಯೋಜನೆಗಳಡಿ ಪರಿಶಿಷ್ಟ ಜಾತಿ / ಪಂಗಡದ ಜನಾಂಗಗಳಿಗೆ ಉಚಿತವಾಗಿ ಎಲ್‌ಪಿಜಿ ಸಂಪರ್ಕ ಮತ್ತು ಸೋಲಾರ್ ವಾಟರ್ ಹೀಟರ್ ಸೌಲಭ್ಯ, ಜೇನುಪೆಟ್ಟಿಗೆ ವಿತರಣೆ ತರಬೇತಿ ಮತ್ತು ಇತ್ಯಾದಿಗಳನ್ನು ಒದಗಿಸುವ ಮೂಲಕ ಅರಣ್ಯದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದಲ್ಲದೇ ಅವರುಗಳ ಆರ್ಥಿಕ ಜೀವನದ ಮಟ್ಟ ಸುಧಾರಿಸಲಾಗುತ್ತಿದೆ.<br>• 2018-19ನೇ ಸಾಲಿನಿಂದ 'ಹಸಿರು ಕರ್ನಾಟಕ' ಎಂಬ ಹೊಸ ಯೋಜನೆಯನ್ನು ಘೋಷಿಸಿದ್ದು, ಇದರಡಿ 2018ನೇ ಮಳೆಗಾಲದಲ್ಲಿ ಶಾಲಾ-ಕಾಲೇಜುಗಳ ಅಂಗಳದಲ್ಲಿ, ಸಾರ್ವಜನಿಕರ ಮನೆಯ ಆವರಣ/ಅಂಗಳದಲ್ಲಿ 16,000 ಸಸಿಗಳನ್ನು ನೆಡಲಾಗಿದೆ. (ಮಾರ್ಚ್-2019ರ ಅಂತ್ಯದವರೆಗೆ) |
| (ಆ) | ಮಾನ್ವಿ ಪಟ್ಟಣದಲ್ಲಿ "ಟ್ರೀ ಪಾರ್ಕ್" ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಮಾನ್ವಿ ಪಟ್ಟಣದ ಮಲ್ಲಿಕಾರ್ಜುನ ಬೆಟ್ಟ ಟ್ರೀಪಾರ್ಕನ್ನು 2017-18ನೇ ಸಾಲಿನಲ್ಲಿ ನಿರ್ಮಾಣ ಕಾರ್ಯಕೈಗೊಂಡಿದ್ದು, ಸದರಿ ವೃಕ್ಷೋದ್ಯಾನದಲ್ಲಿ 6 ಹೆಕ್ಟೇರ್ ಪ್ರದೇಶದ ಹಳೆಯ ನೆಡುತೋಪನ್ನು ನಿರ್ವಹಣೆ ಮಾಡಲಾಗುತ್ತಿದೆ. ಇದರಲ್ಲಿ 3 ಹೆಕ್ಟೇರ್ ಪ್ರದೇಶದಲ್ಲಿ 14"x20" ಅಳತೆಯ ಸಸಿಗಳನ್ನು ಹಾಗೂ ಇನ್ನುಳಿದ 3 ಹೆಕ್ಟೇರ್ ಪ್ರದೇಶದಲ್ಲಿ 10"x16" ಅಳತೆಯ ಸಸಿಗಳನ್ನು ನೆಟ್ಟಿದ್ದು, ಇವುಗಳ ನಿರ್ವಹಣೆ ಮತ್ತು ಶೌಚಾಲಯ, ಕುಳಿತುಕೊಳ್ಳಲು ಸಿಮೆಂಟ್ ಬೆಂಚ್‌ಗಳು, ನಡಿಗೆಪಥ, ವಾಚರ್ ಶೆಡ್, ಮಾಹಿತಿ ಫಲಕಗಳು, ಪ್ರವೇಶದ್ವಾರ ನಿರ್ಮಾಣ, ಪರಗೋಲ, ಮಕ್ಕಳು ಆಡುವ ಆಟಿಕೆಗಳು, ಟಿಕೆಟ್ ಕೌಂಟರ್ ಇದರ ಜೊತೆಗೆ ಪ್ರಸಕ್ತ ಸಾಲಿನಲ್ಲಿ ಕೊಳವೆಬಾವಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಳವಡಿಕೆ, ಕುಡಿಯುವ ನೀರಿನ ಸೌಕರ್ಯ ಮತ್ತು ಪೈಪ್‌ಲೈನ್ ವ್ಯವಸ್ಥೆ ಇತ್ಯಾದಿ ಕಾಮಗಾರಿಗಳನ್ನು ಈ ಕೆಳಕಂಡಂತೆ ಹಂತ-ಹಂತವಾಗಿ ಅನುದಾನವನ್ನು ಬಿಡುಗಡೆ ಮಾಡಿ, ಅಭಿವೃದ್ಧಿಪಡಿಸಲಾಗುತ್ತಿದೆ. |

| ವರ್ಷ | ಹಂಚಿಕೆ ಮಾಡಿರುವ ಅನುದಾನ (ರೂ. ಲಕ್ಷಗಳಲ್ಲಿ) |
|---|---|
| 2017-18 | 20.000 |
| 2018-19 | 22.013 |
| 2019-20 | 13.910 |
| ಒಟ್ಟು | **55.923** |

ಸಂಖ್ಯೆ: ಅಪಜೀ 18 ಎಫ್‌ಟಿಎಸ್ 2019

(ಸತೀಶ್ ಎಲ್. ಜಾರಕಿಹೊಳಿ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು